ಎಂ.ಎಸ್. ಶ್ರೀರಾಮ್



# ಬಹು ಆಯಾಮಗಳ ಅಂಬೇಡ್ಕರ್ ಮತ್ತು ಜಾತಿಪದ್ಧತಿಯ ನಿಲುವುಗಳು

ಇತ್ತೀಚೆಗೆ ಅಂಬೇಡ್ಕರ್ ಜೀವನದ ಬಗ್ಗೆ ಐದು ಪುಸ್ತಕಗಳು ಬಂದಿವೆ. ಶಶಿ ಥರೂರ್ ಬರೆದ ಜೀವನಚರಿತ್ರೆ, ಅಂಬೇಡ್ಕರ್ ಪತ್ನಿ ಸವಿತಾ ಅಂಬೇಡ್ಕರ್ ಬರೆದ ಒಡನಾಟದ ಆತ್ಮಕಥೆಯ ಅನುವಾದ, ಆಕಾಶ್ ರಾಠೋರ್ ಅವರ ಬಹುಸಂಪುಟಗಳ ಜೀವನ ಚರಿತ್ರೆಯ ಮೊದಲ ಕಂತು, ಸ್ಕಾಟ್ ಸ್ಟ್ರೌಡ್ ಬರೆದ ಅಂಬೇಡ್ಕರ್ ಬೌದ್ಧಿಕ ಜೀವನ ಚರಿತ್ರೆ ಮತ್ತು ಅಶೋಕ್ ಗೋಪಾಲ್ ಅವರ 'ಎ ಪಾರ್ಟ್ ಅಪಾರ್ಟ್' (ಭಿನ್ನವಾದ ವಿಶಿಷ್ಟ ಭಾಗ) ಎನ್ನುವ ವಿಸ್ತಾರವಾದ ಜೀವನ ಚರಿತ್ರೆ. ಇಂಗ್ಲೀಷಿನಲ್ಲಿ ಈವರೆಗೆ ಲಭ್ಯವಿಲ್ಲದ ಮೂಲ ಮರಾಠಿಯ ದಾಖಲೆ ದಸ್ತಾವೇಜುಗಳನ್ನೂ ಅಶೋಕ್ ಗೋಪಾಲ್ ತಮ್ಮ ಅಧ್ಯಯನಕ್ಕೆ ಬಳಸಿಕೊಳ್ಳುತ್ತಾರಾದ್ದರಿಂದ ಇದು ಒಂದು ವಿಸ್ತಾರವಾದ ಪುಸ್ತಕವಾಗಿದೆ.

ಅಂಬೇಡ್ಕರ್ ಜೀವನವೇ ಬಹು ವಿಸ್ತಾರದ್ದು. ಅವರು ಬೆಳೆದು ಬಂದ ರೀತಿ, ಅವರ ವಿದ್ಯಾರ್ಜನೆ, ಅರ್ಥಶಾಸ್ತ್ರಜ್ಞರಾಗಿ, ಪತ್ರಕರ್ತರಾಗಿ, ವಕೀಲರಾಗಿ, ಸಂವಿಧಾನ ರಚನಾಸಭೆಯ ಅಧ್ಯಕ್ಷರಾಗಿ, ರಾಜಕೀಯ ಚಳವಳಿಗಾರರಾಗಿ, ದಲಿತ ವಿಚಾರಧಾರೆಯ ವಕ್ತಾರರಾಗಿ, ಬೌದ್ಧ ಧರ್ಮದ ಮೀಮಾಂಸಕರಾಗಿ, ಬರಹಗಾರರಾಗಿ ಅವರು ಮಾಡಿಟ್ಟ, ಮಾಡುತ್ತಿದ್ದು ಮುಕ್ತಾಯಗೊಳ್ಳದ, ಮಾಡಬೇಕೆಂದು ವಿಚಾರ ಮಾಡಿದ್ದ ಕೆಲಸದ ವಿಸ್ತಾರವನ್ನು ಸರಳವಾಗಿ ಗ್ರಹಿಸಿ, ಒಂದು ಪುಸ್ತಕದಲ್ಲಿ- ಓದಿಗೆ ಧಕ್ಕೆ ಬಾರದಂತೆ- ಸೆರೆಹಿಡಿಯುವುದು ಸರಳವಾದ ಮಾತಲ್ಲ. ಆದರೆ ಅಶೋಕ್ ಗೋಪಾಲ್ ಈ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಗಾಂಧಿ ನಮಗೆ ನೈತಿಕ ನೆಲೆಯನ್ನು ಹೇಳಿಕೊಟ್ಟ ನಾಯಕರಾದರೆ, ಅಂಬೇಡ್ಕರು ನಮ್ಮ ಸಮಾಜದ ಅಂತರ್‌ವಿರೋಧಗಳನ್ನಷ್ಟೇ ಅಲ್ಲ, ಗಾಂಧಿಯಲ್ಲಿದ್ದ ವಿರೋಧಾಭಾಸವನ್ನೂ ಗ್ರಹಿಸಿ ಅದನ್ನು ನಿಕಷಕ್ಕೊಡ್ಡಿ ಹಲವು ಆಯಾಮಗಳನ್ನು ತೆರೆದುಕೊಡುತ್ತಾರೆ.

> ಅಂಬೇಡ್ಕರ್ ಎರಡು ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಅರ್ಥಶಾಸ್ತ್ರದ ಅಧ್ಯಯನ ಮಾಡುತ್ತಾರೆ. ಇನ್ನೊಂದೆಡೆ ಕಾನೂನು ಕಲಿತು ವಕೀಲರಾಗೂ ಮಿಂಚುತ್ತಾರೆ. ತಮಗಿದ್ದ ಆರ್ಥಿಕ ಸಾಮಾಜಿಕ ಪರಿಸ್ಥಿತಿಯಲ್ಲಿ ಇದು ಸಾಧಾರಣವಾದ ವಿಷಯವೇನೂ ಅಲ್ಲ.

ಅಂಬೇಡ್ಕರ್ ತಮ್ಮ ಜೀವನಕಾಲದಲ್ಲಿ ಅಪಾರವಾಗಿ ಬರೆದಿದ್ದರು. ಆದರೆ, ಅವರ ಸಾಹಿತ್ಯವನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸಲು ಸಾಧ್ಯವಾಗಿಲ್ಲ. ಅದನ್ನು ಸರಿಯಾಗಿ ವರ್ಗೀಕರಿಸಿಯೂ ಇಲ್ಲ ಎಂದು ಗೋಪಾಲ್ ಹೇಳುತ್ತಾರೆ. ಗಾಂಧಿ ಮತ್ತು ನೆಹರೂ ಅವರ ಬಗ್ಗೆ ಅಪಾರ ಸಾಹಿತ್ಯ ಬಂದಿರುವುದಕ್ಕೆ ಅವರಿಬ್ಬರ ಜೀವನಕಾಲದ ದಾಖಲೆಗಳು ನಿಯಮಿತವಾಗಿ ಲಭ್ಯವಿರುವುದೂ ಒಂದು ಕಾರಣವಿರಬಹುದು. ಅಂಬೇಡ್ಕರ್ ಬಗ್ಗೆ ಸಂಗ್ರಹವಾಗಿರುವ, ಒಂದು ಜಾಗದಲ್ಲಿ